ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ೧೯೮೧ರಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಸರಕಾರಿ ಕಿರಿಯ ಕಾಲೇಜು ಉಸನ್ನಾಸಕರನ್ನು ಖಾಯಂಗೊಳಿಸಲಾಯಿತು. ಗುತ್ತಿಗೆ ಆಧಾರ ಮೇಲೆ ಕೆಲಸ ಮಾಡುತ್ತಿರುವ ೧೨,೦೦೦ಕ್ಕೂ ಮಿಕ್ಕಿ ಇರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಿರಿಯ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಶಿಕ್ಷಕರನ್ನು ಖಾಯಂಗೊಳಿಸಲು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿದೆ. ಅದೇ ಸಹಾನುಭೂತಿಯ ಪರಿಶೀಲನೆ ಹಾಗೂ ಆಶ್ವಾಸನೆ, ಕೈಗಾರಿಕಾ ತರಬೇತಿ ಸಂಸ್ಥೆಗಳ ಅಧ್ಯಾಪಕರಿಗೂ ಆನ್ವಯಿಸ ಪುದೇ, ಲೋಕಸೇವಾ ಆಯೋಗದವರು ಪಾಲ್ಟೆಗಳನ್ನು ಭರ್ತಿ ಮಾಡುವಾಗ ಗುತ್ತಿಗೆ ಆಧಾರದ ಸಂತ್ರಸ್ತ ಉದ್ಯೋಗಿಗಳಿಗೆ ಅವಕಾಶ ನೀಡುವುದೇ ಎಂದು ತಿಳಿಯುಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.....ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಈ ಶಿಕ್ಷಕರ ಪ್ರಶ್ನೆಯನ್ನು ಕೂಡ ನಾವು ಉಳಿದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರ ಜೊತೆಯಲ್ಲಿ ಆಲೋಚನೆ ಮಾಡುತ್ತೇವೆ.

(೧೫) ಪ್ರತ್ಯೇಕವಾಗಿ ಉಡುಪಿ ಜಿಲ್ಲೆ ರಚನೆ ಮಾಡುವ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).....ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಜನತೆಯ ಬಹು ವರ್ಷಗಳ ಸಾರ್ವತ್ರಿಕ ಬೇಡಿಕೆ. ಪ್ರತ್ಯೇಕ ಉಡುಪಿ ಜಿಲ್ಲೆಯ ರಚನೆ ಹಾಗೂ ಸೈಂದೂರು, ಬ್ರಹ್ಮಾವರ, ಪೂಲ್ಕಿ ಇತ್ಯಾದಿ ತಾಲ್ಲೂಕುಗಳ ರಚನೆ.

ಈ ಕುರಿತಾದ ಸಂಬಂಧಪಟ್ಟ ಶಾಸಕರ ಮನವಿಗೆ ಸರ್ಕಾರ ಇನ್ನೂ ಪುನ್ನಣೆ ನೀಡಿಲ್ಲ ಜಿಲ್ಲಾ ಪುನರ್ವಿಂಗಡಣಾ ಆಯೋಗದವರು ಈ ವಿಚಾರದಲ್ಲಿ ತುಂಬಾ ಅನುಕೂಲಕರವಾದ ವರದಿ ಮಾಡಿದ್ದಾರೆಂದು ತಿಳಿದು ಬಂದಿದ್ದರೂ ಸರ್ಕಾರ ತೀರ್ಮಾನ ಕೈಗೊಂಡಿಲ್ಲ. ಜಿಲ್ಲಾ ಪರಿಷತ್ ಚುನಾವಣೆಯು ಬಳಿಕ, ಜಿಲ್ಲೆಗಳ ಪುನರ್ರಚನೆ ಮಾಡಲಾಗುವುದೆಂಬ ಆಶ್ವಾಸನೆ ಹಾಗೇ ಉಳಿದಿದೆ. ಬಿಂಗಳೂರು ಜಿಲ್ಲೆಯ ವಿಭಜನೆ ಸಲುವಾಗಿ ಮಾತ್ರ ಚುನಾವಣೆಗೆ ಮೊದಲೇ ಕಾರ್ಯಗತವಾಗಿದೆ. ಉಡುಪಿ ಜಿಲ್ಲೆ ಹಾಗೂ ಬೈಂದೂರು ಇತ್ಯಾದಿ ತಾಲ್ಲೂಕುಗಳ ರಚನೆ ಯಾವಾಗ ಆಗುತ್ತದೆ ಮತ್ತು ದಕ್ಷಿಣ ಕನ್ನಡದ ಬಹು ಕ್ಲಿಷ್ಟವಾದ ಈಗಿನ ಆಡಳಿತ ಸಮಸ್ಯೆ ಹಾಗೂ ಹೊಣೆ ಎಂದಿಗೆ ಸರಳವೂ. ಸುಲಲಿತವೂ ಆಗುತ್ತದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).....ಮಾನ್ಯ ಅಧ್ಯಕ್ಷರೇ, ದಿನಾಂಕ ೨೫ನೇ ಮೇ ೧೯೮೫ರಲ್ಲಿ ಶ್ರೀ ಪುಂಜೇಕರ್‌ರವರ ನೇತೃತ್ವದಲ್ಲಿ ರಚಿಸಿರುವ ಜಿಲ್ಲಾ ಪುನರ್ವಿಂಗಡಣಾ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಉಡುಪಿ ಹೊಸ ಜಿಲ್ಲೆ, ಹಾಗೂ ಪುಂಡೂರು ಹೊಸ ತಾಲ್ಲೂಕುಗಳಾದ ಮಂಲ್ಕಿ, ಬೈಂದೂರು ಹಾಗೂ ಬ್ರಹ್ಮಾವರಗಳನ್ನು ರಚಿಸಲು ಸರ್ಕಾರಕ್ಕೆ ಈಗಾಗಲೇ ಶಿಫಾರಸ್ಸು ಮಾಡಿದೆ. ಸದರಿ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ೨೧ನೇ ಆಗಸ್ಟ್ ೧೯೮೫ರಲ್ಲಿ ಸಲ್ಲಿಸಿದೆ. ಈ ವರದಿ ಬಂದ ನಂತರ ಕೆಲವೊಂದು ಮನವಿಗಳು ಸಾರ್ವಜನಿಕರಿಂದ, ಜಿಲ್ಲಾ ಹಾಗೂ ತಾಲ್ಲೂಕು ಪುನರ್ವಿಂಗಡಣೆ ಬಗ್ಗೆ ಬಂದಿವೆ. ಇವುಗಳನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಲಾಗುತ್ತದೆ.

(೧೬) ಜಮಖಂಡಿಯ ಸರ್ಕಲ್ ಇನ್ಸ್‌ಪೆಕ್ಟರ್‌ರವರ ವರ್ಗಾವಣೆ ಬಗ್ಗೆ

ಶ್ರೀ ಬಾಬುರೆಡ್ಡಿ ಎ. ತುಂಗಳ್ (ಬೀಳಗಿ).....ಮಾನ್ಯ ಅಧ್ಯಕ್ಷರೇ, ಜಮಖಂಡಿಯಲ್ಲಿ ಸಿ ಎಸ್. ಜಂಗಮಂಶೆಟ್ಟಿ ಎಂಬ ಸರ್ಕಲ್ ಪೋಲೀಸ್ ಇನ್‌ಸ್ಪೆಕ್ಟರ್ ಇದ್ದಾರೆ. ಈ ಅಧಿಕಾರಿ ಅತ್ಯಂತ ಬ್ರಷ್ಟ ಅಧಿಕಾರಿಯಾಗಿದ್ದು, ಈತನ ಭ್ರಷ್ಟಾಚಾರದಿಂದ ಕೈಕೆಳಗಿನವರೆಲ್ಲಾ, ರೋಸಿ ಹೋಗಿ ಹಾಳಾಗಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ಈ ಅಧಿಕಾರಿ ಕಾನೂನು ಮತ್ತು ಸುವ್ಯವಸ್ಥೆಯ ಕೆಲಸ ಮಾಡದೆ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿದ್ದಾನೆ. ಗಲಭೆಗಳು ನಡೆಯುತ್ತವೆಯೆಂಬ ಸೂಚನೆ ಗೊತ್ತಿದ್ದರೂ, ಈ ಅಧಿಕಾರಿ ಯಾವುದೇ ಕ್ರಮಗಳಿಗೆ ಮುಂದಾಗಿಲ್ಲ. ಈತನ ಬೇಜವಾಬ್ದಾರಿತನದಿಂದ ಅನೇಕ ಕಡೆ ನಮ್ಮ ಪಕ್ಷದ ಕಾರ್ಯಕರ್ತರು ಗಂಡಾಗಾಲಿಯಿಂದ ಹೊಡೆತ ತಿನ್ನಬೇಕಾಯಿತಲ್ಲದೆ, ಇದು ಅನೇಕರು ಮರಣವಾಕ್ಕೆ ಬಿದ್ದವರು. ಈ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ನಮ್ಮ ಪಕ್ಷದ ಅನೇಕ ಕಾರ್ಯಕರ್ತರ ಮೇಲೆ ಬಿದರಿ, ತದಲಬಾಗಿ, ಹಿರೇಪದಸಲಗಿ,

ಅಡಿಹುಡಿ, ಗದ್ಯಾಳ ಗ್ರಾಮಗಳಲ್ಲಿ ಗುಂಡಾಗಳು ಧಾಳಿ ಮಾಡುತ್ತಿದ್ದಾರೆ. ಗದ್ಯಾಳ ಎಂಬ ಗ್ರಾಮದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಸುಳ್ಳು ಆರೋಪ ಹೊರಿಸಿ, ಅವರನ್ನು ಅಕ್ರಮ ವಾಗಿ ಬಂಧಿಸಿ ಪೋಲೀಸ್ ಲಾಕಪ್‌ಗೆ ಕಳುಹಿಸಲಾಗಿದೆ. ಗೂಂಡಾಗಳು ನಮ್ಮ ಪಕ್ಷದ ಕಾರ್ಯಕರ್ತರಿಗೆ ಜೀವದ ಬೆದರಿಕೆ ಹಾಕುತ್ತಿದ್ದು, ಬೆದರಿಕೆಗೊಳಗಾದವರನ್ನೇ, ಈ ಅಧಿಕಾರಿ ಬಂಧಿಸಿದ್ದಾನೆಂದು ತಿಳಿದು ಬಂದಿದೆ. ಈ ಅಧಿಕಾರಿ ಜಂಗಮಶೆಟ್ಟಿಯು ದುರ್ವರ್ತನೆಯ ಕುರಿತು ದಿನಾಂಕ ೨೨-೨-೮೭ ರಂದು ಡಿ. ಜಿ. ಪಿ. ಮಾನ್ಯ ನಿಜಾಮುದ್ದೀನ್ ಅವರಿಗೆ ದೂರವಾಣಿ ಮೂಲಕ ಮಾನಾಡಿ ತಿಳಿಸಿದರೂ ಯಾವುದೇ ಪ್ರಯೋಜನವಾದಂತೆ ಕಾಣಲಿಲ್ಲ. ಆತನ ದೌರ್ಜನ್ಯ ಮುಂದುವರಿದಿದೆ, ಜನ ಪೀಡಕನಾದ ಈ ಸಿ. ಪಿ. ಐ., ಜಂಗಮಶೆಟ್ಟಿಯ ವಿರುದ್ಧ ಮಾನ್ಯ ಗೃಹ ಸಚಿವರು ಕ್ರಮ ಕೈಗೊಳ್ಳದೇ ಹೋದಲ್ಲಿ, ನಾನು ನನ್ನ ಪಕ್ಷದ ಕಾರ್ಯ ಕರ್ತರ ರಕ್ಷಣೆಗಾಗಿ ಅನಿವಾರ್ಯವಾಗಿ ಬೀದಿಗಿಳಿಯು ಬೇಕಾಗುತ್ತದೆ. ಈ ಅಧಿಕಾರಿಯ ಉದ್ಧಟ ವರ್ತನೆಯನ್ನು ತಪ್ಪಿಗಟ್ಟಿದ್ದರೆ, ಪರಿಷ್ಕರಿಸಿ ಪಿಕೋಪಕ್ಕೆ ತೋಗುತ್ತದೆ. ಎಂಬ ವಿಷಯದ ಕಡೆ ನಾನು ತಮ್ಮ ಮುಖಾಂತರ ಮಾನ್ಯ ಗೃಹಸಚಿವರ ಗಮನ ಸೆಳೆಯುಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ, ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ನೀಡಬಯಸುತ್ತೇನೆ

ಶ್ರೀ ಸಿ. ಎಸ್. ಜಂಗಮಶೆಟ್ಟಿಯವರು ಜಮಖಂಡಿ ವೃತ್ತದಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಆಗಿ ದಿನಾಂಕ ೨೫-೮-೮೫ ರಿಂದ ಕಾರ್ಯನಿರ್ವಹಿಸಿತ್ತಿರುತ್ತಾರೆ. ಇವರ ಅಧೀನ ಸಿಬ್ಬಂದಿಯವರು ಯಾರು ಇವರ ಬಷ್ಟಾಚಾರ ಇಲ್ಲವೇ ಏಂಸೆ ಮಾಡಿರುವ ಬಗ್ಗೆ ದೂರುಸಲ್ಲಿಸಿರುವುದಿಲ್ಲ.

ಬೇರೆ ರಾಜಕೀಯ ವ್ಯಕ್ತಿಗಳಿಂದ ಸಹ ಸಿಪಿಐ ರವರ ಬ್ರಷ್ಟಾಚಾರದ ಬಗ್ಗೆ ಆಪಾದನೆ ಮಾಡಿರುವ ದೂರು ಬಂದಿರುವುದಿಲ್ಲ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ಸಿ ಪಿ ಐ ರವರು ಬೇಜವಾಬ್ದಾರಿಯಿಂದ ವರ್ತಿಸಿದ ಬಗ್ಗೆ ಇಲ್ಲವೇ ಕಾನೂನು ಮತ್ತು ಸುವ್ಯವಸ್ಥೆ ಕೇಸು ದಾಖಲು ಮಾಡಿಕೊಳ್ಳದೆ ಇದ್ದ ಬಗ್ಗೆ ಯಾವ ದೂರು ಬಂದಿರುವುದಿಲ್ಲ. ಚುನಾವಣಾ ಕಾಲದಲ್ಲಿ ಸಿಪಿಐ ರವರು ಬಿದರಿ, ತೊಡಲಬಾಗಿ, ಬಿರೆಪಡಸಲಗಿ, ಹಡಿಹುಡಿ, ಗದ್ಯಾಳ ಗ್ರಾಮಗಳನ್ನೊಳಗೊಂಡ ೫೨ ಹಳ್ಳಿಗಳಿಗೆ ಭೇಟಿ ಕೊಟ್ಟಿರುತ್ತಾರೆ. ಗದ್ಯಾಳ ಗ್ರಾಮದಲ್ಲಿ ಯಾವ ಕೇಸನ್ನು ದಾಖಲ್ಮಾಡಿರುವುದಿಲ್ಲ. ಜಮಖಂಡಿ ವೃತ್ತದಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಕೆಳಗೆ ನಮೂದಿಸಿರುವ ಎರಡು ಮೊಕದ್ದಮೆಗಳು ದಾಖಲಾಗಿರುತ್ತವೆ.

(೧) ದಿನಾಂಕ ೯-೧-೮೭ ರಂದು ಸಾಮಲಗಿ ಪೋಲೀಸ್ ಠಾಣೆ ಸರಹದ್ದಿನಲ್ಲಿರುವ ತೊಡಲಬಾಗಿ ಗ್ರಾಮದಲ್ಲಿ ಶ್ರೀಮತಿ ರಾಮವ್ವ ಕೋಂ. ಸಾಬುಭಜಂತ್ರಿ ಇವರು ಮಲ್ಲಪ್ಪ ಮತ್ತು ಲಕ್ಷ್ಮಣಿಹೇಗೊಂಡ ಮತ್ತು ೬ ಜನರುಗಳು ಜಬರದಸ್ತಿನಿಂದ ಅವರ ನಾಮನಿರ್ದೇಶನವನ್ನು ಪಾಪಸ್ಸು ಪಡೆಯಲು ಹೇಳಿದುದರ ಆಪಾದನೆಯ ಮೇಲೆ ಸಾಮಲಗಿ ಪೋಲೀಸ್ ಠಾಣೆ ಕ್ರೈಂ ನಂಬರು ೪-೮೭ ಕಲಂ ೧೪೭-೫೦೬, ೧೪೧ (ಜ) ಐಪಿಸಿ ಕೇಸನ್ನು ದಾಖಲ್ಮಾಡಲಾಗಿದೆ. ತನಿಖೆ ಮುಂಗಿದನಂತರ ಮೊಕದ್ದಮೆಯು ತಪ್ಪಾಗಿರುವುದರಿಂದ, ಬಿ ರಿಪೋರ್ಟನ್ನು ಸಲ್ಲಿಸಲಾಗುತ್ತಿದೆ.

(೨) ಚುನಾವಣೆಗಳು ಮುಗಿದನಂತರ ದಿನಾಂಕ ೨೪-೧-೮೭ ರಂದು ಹಲಗೂರು ಗ್ರಾಮದ ಶ್ರೀಮತಿ ಮಲ್ಲಪ್ಪ ರುದ್ರಪ್ಪ ಹರಿಜನ ಇವರು ಸಲ್ಲಿಸಿರುವ ದೂರಿನ ಮೇಲೆ ಸದರಿ ಗ್ರಾಮದ ಕಸ್ತೂರಿ ಹರಿಜನ ಇವರ ವಿರುದ್ಧ ಜಮಖಂಡಿ ಪೋಲೀಸ್ ಠಾಣೆ ಮೊಕದ್ದಮೆ ನಂಬರು ೧೯-೮೭ ಕಲಂ ೧೭೦ (ಎಫ್) ೪೧೯, ೪೨೦, ೪೬೮ ಐಪಿಸಿ ಪ್ರಕಾರ ದಾಖಲ್ಮಾಡಿರುತ್ತೆ. ಸದರಿ ಕೇಸು ತನಿಖೆಯಲ್ಲಿದೆ.

ಜಮಖಂಡಿಯಿಂದ ಜನತಾ ಪಕ್ಷದ ಕಾರ್ಯಕರ್ತರಿಗೆ ತೊಂದರೆ ಪಡಿಸಿರುವ ಬಗ್ಗೆ ಯಾವ ದೂರೂ ಬಂದಿರುವುದಿಲ್ಲ.

ಎಂ. ಎಲ್. ಎ. ರವರು ತಾ. ೨-೨-೮೭ ರಂದು ಡಿ. ಜಿ. ಮತ್ತು ಐ. ಜಿ. ಪಿ. ಯವರಿಗೆ ಮಾಡಿದ ದೂರಿನ ಮೇರೆಗೆ ಎಸ್. ಪಿ. ಯವರಿಂದ ವಿಚಾರಣೆ ನಡೆಯುತ್ತಿದೆ.